**O.S.No: 13-2015**

**(ಇಂದು ದಿಃ 18-07-2019 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪುನ: ಕರೆಯಿಸಿ ಪ್ರಮಾಣವವಚನ ಭೋಧಿಸಲಾಯಿತು)**

**<u>ಮುಂದುವರಿದ ಪಾಟೀ ಸವಾಲು ಪ್ರತಿವಾದಿ ಪರ: ಶ್ರೀಮತಿ. ಎಮ್.ವಿ.ಎಲ್. ವಕೀಲರಿಂದ</u>**

ಸರ್ವೆ ನಂ.48 ರಲ್ಲಿ 48/ಅ ಮತ್ತು 48/ಆ ಎರಡು ಹಿಸ್ಸೆ ಇವೆ ಎಂದರೆ ಸರಿ. 48/ಅ ದಲ್ಲಿ ಒಟ್ಟು ಎಂಟು ಎಕರೆ ಆರು ಗುಂಟೆ ಪೈಕಿ ಹದಿಮೂರು ಗುಂಟೆ ಪೋಟ ಖರಾರು ಇದೆ ಎಂದರೆ ಸರಿ. ಪಹಣಿಯಲ್ಲಿ ರಜಿಯಾ ಬೇಗಂ ಹೆಸರಿಗೆ ಏಳು ಎಕರೆ ಮೂವತ್ಮೂರು ಗುಂಟೆ ತೋರಿಸಿದ್ದಾರೆ ಎಂದರೆ ಸರಿ. ನಿ.ಡಿ.8 ನ್ನು ಮಾಡಿಕೊಳ್ಳುವಾಗ ವಿಸ್ತೀರ್ಣವನ್ನು 8 ಎಕರೆ 6 ಗುಂಟೆ ತೋರಿಸಿದ್ದಾರೆ ಎಂದರೆ ಸರಿ. ಸರ್ವೆ ನಂ: 48/ಆ ಮಹೆಬೂಬ ಪಟೇಲ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅಮೀನ ಬೀ ಹೆಸರಿನಲ್ಲಿ ಕೂಡ ಇದೆ ಎಂದು ಹೇಳುತ್ತಾರೆ. ಅಮೀನ್ ಬೀ ಹೆಸರಿನಲ್ಲಿ ಕೂಡ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆಯ ಹೆಸರನಲ್ಲಿ ಸರ್ವೆ ನಂ: 48/ಆ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೆ ನಂ: 48/ಆ ದಲ್ಲಿ 27 ಗುಂಟೆ ಜಮೀನು ಮೊದಲಿಗೆ ನಮ್ಮ ತಂದೆಗೆ ಸೇರಿತ್ತು. ಪೂರ್ತಿ ಸರ್ವೆ ನಂ: 48 ರ ದಕ್ಷಿಣಕ್ಕೆ ಇರುವ 26 ಗುಂಟೆ ಜಮೀನು ವ್ಯವಸಾಯಕ್ಕೆ ಯೋಗ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ: 4 ಕ್ಕೆ ಉತ್ತರದ ಕಡೆ 19 ಗುಂಟೆ ಪೋಟ ಖರಾಬ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ: 5 ರಲ್ಲಿ ಕೂಡ 18 ಗುಂಟೆ ಪೋಟ ಖರಾಬ ಇದೆ ಎಂದರೆ ಸರಿಯಲ್ಲ. ಸರ್ವೆ ನಂ 48, 4 ಮತ್ತು 5 ರ ನಡುವೆ ಇರುವ ದಾರಿಯನ್ನು ಪೂರ್ವ ಭಾಗಕ್ಕೆ ಇರುವ ಜಮೀನಿನ ಮಾಲೀಕರು ರಸ್ತೆಯಾಗಿ ಉಪಯೋಗಿಸುತ್ತಿರುವುದರಿಂದ ಪೋಟ ಕರಾಬ ತೋರಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ತನ್ನ ಜಮೀನಿಗೆ ಹೋಗಲು ರಸ್ತೆಯನ್ನು ಕೊಡಬಾರದು ಎಂಬ ದುರುದ್ದೇಶದಿಂದ ರಸ್ತೆ ಇರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೆ. ಸರಿ. ಇದೆ.**

**ಸಿವಿಲ್ ನ್ಯಾಯಾಧೀಶರು, ಶಹಬಾದ.**